ಕೃಷಿ ಬೆಲೆ ವಿಮೆಯಲ್ಲಿ ರೈತರು ಖಾಸಗಿ ಸಂಸ್ಥೆಯವರಿಂದ ಮೋಸ ಹೋಗುತ್ತಿರುವ ಬಗ್ಗೆ

ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

23 (108) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿಯಲ್ಲಿ ಖಾಸಗಿ ವಿಮಾ ಸಂಸ್ಥೆಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ನಿಯಮಗಳನ್ನು ರೂಪಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ತರಹದ ನಿಯಮಾವಳಿಗಳಿಂದ ರೈತರು ಪ್ರೀಮಿಯಂ ಹಣವನ್ನು ಪಾವತಿಸಿದ್ದರೂ ಅವರಿಗೆ ವಿಮೆ ಸೌಲಭ್ಯದ ಮೊತ್ತವು ಪಾವತಿಯಾಗದೆ ಸಂಕಷ್ಟದಲ್ಲಿರುವುದು ನಿಜವೇ ;

(ಇ) ಈ ವರ್ಷ ಮುಂಗಾರು ಹಂಗಾಮದಲ್ಲಿ ಖಾಸಗಿ ವಿಮಾ ಸಂಸ್ಥೆಗಳಿಗೆ ನಮ್ಮ ರಾಜ್ಯವೊಂದರಿಂದಲೇ 1,500 ಕೋಟಿ ರೂಪಾಯಿ ಲಾಭವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಕಳೆದ 3 ವರ್ಷದ ಅವಧಿಯಲ್ಲಿ ಫಸಲ್ ಭೀಮಾ ಯೋಜನೆ ಫಲಾನುಭವಿಗಳ ವರ್ಷವಾರು ವಿವರ ನೀಡುವುದು ;

(ಉ) ಈ ತರಹದ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ ?